(ಕಂದಾಯ ಇಲಾಖೆ)

## ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ

ಎ.ವಿಲೇ.ನಂ.ಕಂ.ಪಹಣಿ.ಅಪೀಲು:80/2014-15 ದಿನಾಂಕ:02.08.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ**

**ವಾದಿಗಳು: ಶ್ರೀ/ ಶ್ರೀಮತಿ**

1. ಟಿ.ಮೂಗಪ್ಪ ತಂದೆ ಬಸಟೆಪ್ಪ,
   ವಾಸ: ಉಜ್ಜಿನಿ ಸರ್ಕಲ್, ಕೊಟ್ಟೂರು ಪಟ್ಟಣ,
   ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ವಿ.ಜಿ.ಪ್ರಕಾಶಗೌಡ, ವಕೀಲರು, ಹರಪನಹಳ್ಳಿ. ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ಟಿ.ಗುರುಬಸವರಾಜ ತಂದೆ ದಿ.ಕಾಳಪ್ಪ
   ವಾಸ: : ಉಜ್ಜಿನಿ ಸರ್ಕಲ್, ಕೊಟ್ಟೂರು ಪಟ್ಟಣ,
   ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.
   **[ಶ್ರೀ ಡಿ.ಲಿಂಗರಾಜ, ವಕೀಲರು, ಕೂಡ್ಲಿಗಿ]**
2. ಕಂದಾಯ ನಿರೀಕ್ಷಕರು, ಕೊಟ್ಟೂರು.
3. ತಹಶೀಲ್ದಾರರು, ಕೂಡ್ಲಿಗಿ.

********

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಕೂಡ್ಲಿಗಿ | ಕೊಟ್ಟೂರು | ಹ್ಯಾಳ್ಯ | 674/ಜಿ | 08 ಎಕರೆ 64 ಸೆಂಟ್ಸ್ |
| | | | 676 | 01 ಎಕರೆ 31 ಸೆಂಟ್ಸ್ |

**ಪೀಠಿಕೆ:**

ಕೂಡ್ಲಿಗಿ ತಾಲೂಕು ಕೊಟ್ಟೂರು ಹೋಬಳಿ ಹ್ಯಾಳ್ಯ ಗ್ರಾಮದ ಸ.ನಂ.674 ವಿಸ್ತೀರ್ಣ: 08 ಎಕರೆ 64 ಸೆಂಟ್ಸ್; ಸ.ನಂ.676 ವಿಸ್ತೀರ್ಣ: 01 ಎಕರೆ 31 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೊಟ್ಟೂರು ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:10/1997-98 ದಿನಾಂಕ:23.05.1998 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:10.07.2014 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:19.08.2014 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆದರೆ, ವಿಚಾರಣೆ ಪ್ರಾರಂಭಿಸಿದಾಗಿನಿಂದ ಉಭಯ ಪಕ್ಷಗಾರರು ಸತತವಾಗಿ ಗೈರುಹಾಜರಾಗಿದ್ದು, ಪ್ರಕರಣದಲ್ಲಿ ಆಸಕ್ತಿ ಇಲ್ಲದೇ ಇರುವುದು ಕಂಡುಬಂದಿರುತ್ತದೆ. ಹಾಗೂ ತಮ್ಮ ಅಪೀಲನ್ನು ಸಾಬೀತುಪಡಿಸಿಕೊಳ್ಳಲು ಪೂರಕವಾದ ಯಾವುದೇ ದಾಖಲೆಗಳನ್ನು ಸಹ ಸಲ್ಲಿಸಿರುವುದಿಲ್ಲ. ಆದುದರಿಂದ, ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಈ ಕೆಳಕಂಡಂತೆ

**-:ಆದೇಶ:-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಉಭಯ ಪಕ್ಷಗಾರರು ಸತತವಾಗಿ ಗೈರುಹಾಜರಾಗಿರುವುದರಿಂದ, ಸದರಿ ಅಪೀಲನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ. (dismissed for default).

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:02.08.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

Sub Divisional Magistrate, Hospet

**[ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]**
**ಸಹಾಯಕ ಆಯುಕ್ತರು,**
**ಹೊಸಪೇಟೆ.**

ವಾದಿ : ಪ್ರತಿವಾದಿಗಳಿಗೆ

**ಪ್ರತಿಯನ್ನು:** ತಹಶೀಲ್ದಾರರು, ಕೂಡ್ಲಿಗಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.